**<u>ಸಾಕ್ಷಿಯನ್ನು ದಿನಾಂಕಃ16.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್ ಎಂ ವಕೀಲರಿಂದಃ</u>**

1. ನಾನು 1 ನೇ ಅಪರ ಸಿವಿಲ್ ನ್ಯಾಯಾಲಯ ಮದ್ದೂರಿನಲ್ಲಿ ಅಸಲು ದಾವಾ ನಂಬರ್ 142/21 ಅನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ನಮ್ಮ ತಂದೆ ನನಗೆ ವಿಲ್ ಮಾಡಿಕೊಟ್ಟಿದ್ದ ಒಂದು ಆಸ್ತಿಯ ಬಗ್ಗೆ ಸಲ್ಲಿಸಿದ್ದೆ. ಆ ದಾವೆಯನ್ನು ನಾವು ನಿರ್ಭಂದಕಾಜ್ಞೆ ಮಾತ್ರ ಕೋರಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನನ್ನ ಪರವಾಗಿ ತೀರ್ಪು ಆಗಿದ್ದು ನಾನೇ ಹಕ್ಕುದಾರಳು ಎಂದು ಆದೇಶ ಆಗಿರುತ್ತದೆ. ನಾನು ನಿರ್ಭಂದಕಾಜ್ಞೆ ಕೋರಿ ಮಾತ್ರ ದಾವೆ ಸಲ್ಲಿಸಿದ್ದು, ಪ್ರತಿವಾದಿಯರು ಏಕಪಕ್ಷೀಯ ಆಗಿದ್ದರಿಂದ ನನಗೆ ಏಕಪಕ್ಷೀಯ ಆದೇಶ ಸಿಕ್ಕಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಟ್ಟಿಲ್ಲ. ಆ ದಾವೆಯ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಮ್ಮ ತಂದೆ ನನಗೆ ವಿಲ್ ಮಾಡಿಕೊಟ್ಟ ದಿನಾಂಕ ಹೇಳಲು ನನಗೆ ಗೊತ್ತಿಲ್ಲ, ಅವರು ವಿಲ್ ಮಾಡಿಕೊಟ್ಟು ಸುಮಾರು 6-7 ವರ್ಷಗಳಾಗಿರಬಹುದು. ಈ ಕೇಸನ್ನು ನನ್ನ ತಂದೆ 1 ನೇ ಪ್ರತಿವಾದಿಯ ಗಂಡ ಮತ್ತು 4 ನೇ ಪ್ರತಿವಾದಿಗೆಕೊಟ್ಟಂತಹ ಆಸ್ತಿಗೆ ಹಾಕಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವೆಲ್ಲಾ ಒಟ್ಟಿಗೆ ಇದ್ದೆವು ಎಂದು ಹೇಳುತ್ತಾರೆ. ನನ್ನ ತಂದೆ ನನಗೆ ವಿಲ್ ಮಾಡಿದ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ. ನಮ್ಮ ತಂದೆಯ ಸ್ವಂತ ಊರು ಬೆಕ್ಕಳಲೆ ಗ್ರಾಮ. ನನ್ನ ತಾತನ ಹೆಸರು ಬಸವಯ್ಯ. ನನ್ನ ತಾತ ಮೃತ ಪಟ್ಟು ಎಷ್ಟು ವರ್ಷಗಳಾಗಿವೆ ಎಂದು ಹೇಳಲು ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಯಲ್ಲಿ ದಾವಾ ಷೆಡ್ಯೂಲ್ ಐಟಂ ನಂಬರ್ 1 ಮತ್ತು 2 ರ

ಆಸ್ತಿಗಳು ಮಾತ್ರ ನಮ್ಮ ತಾತನ ಆಸ್ತಿಗಳು ಎಂದರೆ ಸರಿ. ಸದರಿ ಜಮೀನುಗಳು ಖುಷ್ಕಿ ಜಮೀನುಗಳು ಎಂದರೆ ಸರಿ. ಅವುಗಳಲ್ಲಿ ಏನೂ ಬೆಳೆ ಬೆಳೆಯಲು ಆಗುವುದಿಲ್ಲ ಎಂದರೆ ಮೊದಲು ಬೆಳೆಯುತ್ತಿದ್ದರು, ಈಗ ಬೆಳೆಯುತ್ತಿಲ್ಲ. ಅದರಲ್ಲಿ ಭತ್ತ ಮತ್ತು ರಾಗಿ ಬೆಳೆಯುತ್ತಿದ್ದರು. ಸಾಕ್ಷಿಯು ಮುಂದುವರಿದು ಮೇಲೆ ಹೇಳಿದ ಜಮೀನು ಗದ್ದೆ ಜಮೀನುಗಳು ಎಂದು ನುಡಿದಿರುತ್ತಾರೆ. ಆ ಜಮೀನುಗಳಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನಾ ಎಂದರೆ ಈಗ ಬೆಳೆಯುತ್ತಿಲ್ಲ, ನೀಲಗಿರಿ ಹಾಕಿದ್ದಾರೆ. ನೀಲಗಿರಿ ಹಾಕಿ 5-6 ವರ್ಷಗಳಾಗಿವೆ. ಅದಕ್ಕಿಂತ ಮೊದಲು ಬೆಳೆ ಬೆಳೆಯುತ್ತಿದ್ದರು ಎಂಬ ಬಗ್ಗೆ ತೋರಿಸಲು ದಾಖಲೆಗಳು ಇಲ್ಲ.

2. ನನ್ನ ತಂದೆಯ ಜೊತೆ ಹುಟ್ಟಿದ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಅವರು ಬದುಕಿದ್ದಾರೆ. ನನ್ನ ತಾತನಿಗೆ ಒಟ್ಟು 5 ಜನ ಮಕ್ಕಳು. ನನ್ನ ತಾತನ ಗಂಡು ಮಕ್ಕಳು ವಿಭಾಗ ಆಗಿ ಎಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ಅವರು ವಿಭಾಗ ಆಗಿರುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನನ್ನ ತಂದೆ ಅವರಿಗೆ 10 ವರ್ಷ ವಯಸ್ಸು ಆಗಿದ್ದಾಗಲೇ ಬೆಂಗಳೂರಿಗೆ ಹೋಗಿ ಸೇರಿಕೊಂಡಿದ್ದರು. ಅವರು ವಿಧ್ಯಾಭ್ಯಾಸ ಮಾಡಿರಲಿಲ್ಲ. ನನ್ನ ತಂದೆ ನನ್ನ ತಾತನ ಜಮೀನಿನಲ್ಲಿ ಜೀವನ ಮಾಡಲು ಆಗದಿದ್ದ ಕಾರಣ ಬೆಂಗಳೂರಿಗೆ ಹೋಗಿ ಸೇರಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆ ಬೆಂಗಳೂರಿನಲ್ಲಿ ಹೋಟೇಲ್ ನಲ್ಲಿ ಕೆಲಸ ಮಾಡಿಕೊಂಡು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಅವರು ರಿಯಲ್ ಎಸ್ಟೇಟ್

ಕೆಲಸ ಮತ್ತು ಕುರಿಸಾಕಾಣಿಕೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ನನ್ನ ತಾಯಿಯನ್ನು ಎಷ್ಟನೇ ಇಸವಿಯಲ್ಲಿ ವಿವಾಹ ಆದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಕಾರ್ಪೋರೇಷನ್ ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು ಎಂದರೆ ಸರಿ.

3. ನನ್ನ ಗಂಡ ಚಿಕ್ಕಹೊಸಗಾವಿ ಊರಿನವರು. ನನ್ನನ್ನು ಮದುವೆಯಾದಾಗ ನನ್ನ ಗಂಡ ಬೆಂಗಳೂರಿನಲ್ಲಿ spring ತಯಾರಿಸುವ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ನನ್ನ ಮದುವೆಯಾದಾಗ ಅವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಎಸ್ ಎಸ್ ಎಲ್ ಸಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದಾರೆ. ನನ್ನ ಗಂಡನಿಗೆ ಬರುತ್ತಿದ್ದ ಸಂಬಳದಲ್ಲಿ ಅವರು ಜೀವನ ಮಾಡುವುದು ಕಷ್ಟ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ನನ್ನನ್ನು ಬಡವನಿಗೆ ಕೊಟ್ಟು ಮದುವೆ ಮಾಡಿದ್ದೇನೆ ಎಂಬ ಕೊರಗು ಇತ್ತು ಎಂದರೆ ಸರಿಯಲ್ಲ. ದಿಃ06.12.2010 ರಂದು ದಾಸರಹಳ್ಳಿ ವಾರ್ಡ್ ನಂಬರ್ 13 ಸೈಟ್ ನಂಬರ್ 73 ವಿಸ್ತೀರ್ಣ 40 X 40 ಅಡಿಗಳ ನಿವೇಶನ ಯಾರ ಹೆಸರಿನಲ್ಲಿ ಇದೆ ಎಂದರೆ, 30 x 40 ಅಡಿಗಳ ನಿವೇಶನ ನನ್ನ ಹೆಸರಿನಲ್ಲಿ ಇದ್ದು, ಅದನ್ನು ನಾನು ಮದುವೆಯಾದ ನಂತರ ನಮ್ಮ ಸ್ವಂತ ಸಂಪಾದನೆಯಿಂದ ಖರೀದಿಸಿದ್ದೇವೆ. ಅದನ್ನು ನಾನು ರೂ. 13,80,000/- ಗಳಿಗೆ ಖರೀದಿ ಮಾಡಿದ್ದೇನೆ ಎಂದರೆ, ಅದು ನನಗೆ ಗೊತ್ತಿಲ್ಲ. ನನಗೆ ಸ್ವಂತ ಕೆಲಸ ಏನೂ ಇಲ್ಲ. ಗಂಧದ ಕಾವಲು ಸೈಟ್ ನಂಬರ್ 58 ರ ನಿವೇಶನ ನನ್ನ ಗಂಡನ ಹೆಸರಿನಲ್ಲಿ ಇದೆ, ಸೈಟ್ ನಂಬರ್ 59 ರ ನಿವೇಶನ ನನ್ನ ಹೆಸರಿನಲ್ಲಿ ಇದೆ. ಅದನ್ನು ರೂ. 14,96,000/- ಗಳಿಗೆ

ಖರೀದಿಸಲಾಗಿದೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಗಂಧದ ಕಾವಲು ಆಸ್ತಿ ಸಂಖ್ಯೆ 2387 ಅನ್ನು ದಿಃ 08.06.2013 ರಂದು ರೂ. 40 ಲಕ್ಷಗಳಿಗೆ ಖರೀದಿಸಿದ್ದೇವೆ ಎಂದರೆ ಅದನ್ನು ನನ್ನ ಗಂಡನ ಹೆಸರಿನಲ್ಲಿ ಖರೀದಿಸಿದ್ದು, ಈಗ ಅದನ್ನು ಮಾರಾಟ ಮಾಡಿದ್ದೇವೆ. ಅದನ್ನು ಮಾರಾಟ ಮಾಡಿ 2 ವರ್ಷಗಳಾಗಿವೆ. ಅದನ್ನು ಎಷ್ಟು ಹಣಕ್ಕೆ ಮಾರಾಟ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ದಿಃ26.02 2015 ರಂದು ಸೈಟ್ ನಂಬ್ 72 ವಿಸ್ತೀರ್ಣ 15 x 50 ಅಡಿ ನನ್ನ ಹೆಸರಿನಲ್ಲಿ ರೂ. 15,60,000/- ಗಳಿಗೆ ಖರೀದಿ ಆಗಿದೆ ಎಂದರೆ ಸರಿಯಲ್ಲ. ಮತ್ತೊಂದು ಸೈಟ್ ಅನ್ನು ದಿಃ 06.12.2010 ರಂದು ರೂ. 13 ಲಕ್ಷದ 15 ಸಾವಿರಗಳಿಗೆ ನನ್ನ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ಸೈಟ್ ಗಳನ್ನು ಖರೀದಿಸಲು ನನ್ನ ತಂದೆ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಸ್ವಂತ ದುಡ್ಡಿನಲ್ಲಿ ಆ ಎಲ್ಲಾ ಆಸ್ತಿಗಳನ್ನು ಖರೀದಿಸಿಕೊಟ್ಟಿದ್ದರೂ ನಾನು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ತನ್ನ ತಂದೆಯ ಹತ್ತಿರ ಹಣ ಇರಲಿಲ್ಲ ಅವರು ಕುರಿ ಕಾಯುತ್ತಿದ್ದರು ಎಂದು ನುಡಿದಿರುತ್ತಾರೆ.

4. ಎಡವನಹಳ್ಳಿ ಗ್ರಾಮದಲ್ಲಿ ಒಂದು ಆಸ್ತಿಯನ್ನು ನನ್ನ ತಂದೆ ಖರೀದಿಸಿದ್ದರು. ಅದನ್ನು ನನಗೆ ವಿಲ್ ಮಾಡಿದ್ದಾರೆ. ಎಡವನಹಳ್ಳಿ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಖರೀದಿಯಾಗಿಲ್ಲ. ಎಡವನಹಳ್ಳಿ ಗ್ರಾಮ 1 ಎಕರೆ 1 ಗುಂಟೆ ಜಮೀನು ಮತ್ತು 1 ಎಕರೆ 2 ಜಮೀನನ್ನು ನನ್ನ ತಂದೆ ಒಂದೇ ಸರ್ವೆನಂಬರ್ ನಲ್ಲಿ ಖರೀದಿಸಿದ್ದರು. ಅದನ್ನು ನನ್ನ ತಂದೆ

ಯಾವಾಗ ಖರೀದಿಸಿದ್ದರು ಎಂದು ನನಗೆ ನೆನಪಿಲ್ಲ. ಈ ದಾವಾ ಹಾಕುವಾಗ ನನಗೆ ನನ್ನ ತಂದೆ 2 ಆಸ್ತಿಗಳನ್ನುವಿಲ್ ಮಾಡಿದ್ದಾರೆ ಎಂದು ಹೇಳಿಲ್ಲ. ನನ್ನ ತಂದೆ ಯಾವುದೇ ಆಸ್ತಿಯನ್ನೂ ವಿಲ್ ಮಾಡಿಲ್ಲ, ಅವರು ಸ್ವಂತವಾಗಿ ಖರೀದಿಸಿರುವ ಆಸ್ತಿಗಳನ್ನು ನನ್ನ ಹೆಸರಿಗೆ ಬರೆಸಿದ್ದಾರೆ ಎಂದರೆ ಸರಿಯಲ್ಲ. ವಿಲ್ ಮಾಡಿಕೊಟ್ಟ ಆಸ್ತಿಗಳಿಗೆ ನನ್ನ ತಂದೆ ನನ್ನಿಂದ ರೂ. 20 ಲಕ್ಷ ಹಣವನ್ನು ಅವರಿಗೆ ಅನಾರೋಗ್ಯ ಇದ್ದ ಕಾರಣ ಪಡೆದುಕೊಂಡಿದ್ದಾರೆ. ರೂ. 20 ಲಕ್ಷ ಹಣವನ್ನು ನಾನು ಯಾವ ದಿನಾಂಕ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಆ ರೀತಿ ಹಣ ಕೊಟ್ಟು ಸುಮಾರು 6 ವರ್ಷಗಳಾಗಿವೆ. ನಾನು ಹಣ ಕೊಟ್ಟ ವಿಷಯವನ್ನು ವಿಲ್ ನಲ್ಲಿ ಬರೆಸಿಲ್ಲ.

**ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.